

## ಗಂಧ ತೇಯುವ ಕಲ್ಲು

ಚಿತ್ರದಲ್ಲಿ ಕಾಣುತ್ತಿರುವುದು ಗಂಧ ತೇಯುವ ಕಲ್ಲು. ಈ ಕಲ್ಲಿನ ಮೇಲೆ ಗಂಧದ ಮರದ ಒಂದು ಅಡಿಯ ತುಂಡನ್ನು ತೆಗೆದುಕೊಂಡು ಸ್ವಲ್ಪ ನೀರನ್ನು ಚಿಮುಕಿಸಿ ನಿಧಾನವಾಗಿ ಉಜ್ಜಿದರೆ ಗಂಧವು ಬೆಣ್ಣೆಯಂತೆ ಬರುತ್ತದೆ. ಅದನ್ನೇ ದೇವರಿಗೆ ಸಮರ್ಪಿಸಲಾಗುತ್ತದೆ. ನಂತರ ಅದನ್ನು ತೆಗೆದು ದೇವಾಲಯಕ್ಕೆ ಬಂದ ಭಕ್ತರಿಗೆ ಪ್ರಸಾದ ರೂಪದಲ್ಲಿ ನೀಡಲಾಗುತ್ತದೆ. ಇದು ಕಂಡುಬಂದದ್ದು ಬಾರಕೂರಿನ ಚೌಳಿ ಕೇರಿ ಭೈರವ ಗಣಪತಿ ದೇವಾಲಯದ ಮುಖ ಮಂಟಪದಲ್ಲಿ.

—ಎಂ. ಗಣೇಶ್ ರಾವ್, ಉಡುಪಿ






## ಕಪ್ಪಂಥ ಗೂಡು ಕಟ್ಟಿದ ಪಿಕಳಾರ

ಮನೆಯ ಮುಂದಿನ ಮಲ್ಲಿಗೆಯ ಬಳ್ಳಿಯಲ್ಲಿ ಒಂದು ದಿನ ಉದ್ದನೆ ಕಪ್ಪಂಥ ಪುಟ್ಟ ಗೂಡು ಕಾಣಿಸಿತು. ಅದು ಕೆಂಪು ಕಪಾಳದ ಎರಡು ಪಿಕಳಾರ ಪಕ್ಷಿಗಳು ಮನೆಯಾಗಿತ್ತು. ಒಂದು ಪಕ್ಷಿಯು ಅತ್ಯಂತ ಚಟುವಟಿಕೆಯಿಂದ ಗೂಡಿನ ಸುತ್ತಮುತ್ತ ಅಡ್ಡಾಡುತ್ತ ಗೂಡಿನ ಒಳ ಹೋಗುವುದು, ಹಾಗೆಯೇ ಹೊರಬಂದು ಹಾರಿ ಹೋಗುವುದು ಮಾಡುತ್ತಿತ್ತು. ಮತ್ತೊಂದು ತೆಂಗಿನ ಜುಟ್ಟನ್ನೋ ಒಣಗಿದ ಕಡ್ಡಿಯನ್ನೋ ತಂದು ಗೂಡಿನ ಒಳಗೆ ಮೆತ್ತಗೆ ಆಗುವಂತೆ ಹೊಂದಿಸುತ್ತಿತ್ತು.



ಎರಡರ ಪೈಕಿ ಒಂದು ಪಿಕಳಾರ ಒಳಗೆ ಕುಳಿತು ಗೂಡು ಸರಿಯಾಗಿ ಇದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡುತ್ತಲೇ ಇತ್ತು. ಮಾರನೆಯ ದಿನ ಈ ಗೂಡಿನಲ್ಲಿ ಒಂದು ಪಿಕಳಾರ ಕಾಯಂ ಕುಳಿತು ಬಿಟ್ಟಿತ್ತು. ಬಹುಶಃ ತಾನು ಇಟ್ಟ ತತ್ತಿ (ಮೊಟ್ಟೆ) ಕಾವು ಕೊಡಲು ಇರಬಹುದು. ಆಗ ತೆಗೆದ ಚಿತ್ರವೇ ಈ ಮೊಟ್ಟೆಯದ್ದು.

ಕ್ರಮೇಣ ಗೂಡಿನಲ್ಲಿ ಪಿಕಳಾರ ಕಾಯಂ ಆಗಿ ಕೂಡುವುದರಲ್ಲಿ ವ್ಯತ್ಯಾಸವಾಗಿತ್ತು. ಗೂಡಿನಿಂದ ಇಣುಕುತ್ತಿದ್ದ ಇವು ಒಮ್ಮೊಮ್ಮೆ ಅತ್ತ–ಇತ್ತ, ಮೇಲೆ–ಕೆಳಗೆ ನೋಡಿ ಯಾವ ಭಯವೂ ಇಲ್ಲವೆಂಬುದು ಖಾತರಿಯಾದ ಬಳಿಕ ಹೊರ ಹೋಗಿ ಕೊಕ್ಕಿನಲ್ಲಿ ಹುಳು ಹಿಡಿದು ಬರುತ್ತಿದ್ದವು. ಆಗಲೇ ಅರಿವಾಗಿದ್ದು ಇವು ಮರಿಮಾಡಿವೆ ಎಂದು. ಆಗ ತೆಗೆದ ಚಿತ್ರವೇ ಮತ್ತೊಂದು. ಕೊನೆಗೂ ಇವುಗಳ ಪೂರ್ಣ ಸಂಸಾರ ನೋಡುವ ಭಾಗ್ಯ ಸಿಗದಿರುವುದು ನಿರಾಸೆ ತಂದಿತ್ತು. ಊರಿಗೆ ಹೋಗಿ ಬರುವಷ್ಟರಲ್ಲಿ ಪಿಕಳಾರ ಹಕ್ಕಿಗಳು ಆ ಗೂಡನ್ನು ಖಾಲಿ ಮಾಡಿದ್ದವು. ಆಗ ಕಾಡಿದ್ದು... ಶ್ರಮದಿಂದ ತಯಾರಿಸಿದ ಗೂಡನ್ನು ತನ್ನ ಉದ್ದೇಶ ಮುಗಿದ ನಂತರ ನಿರ್ಮೋಹದಿಂದ ಬಿಟ್ಟು ಹೋಗುವದು ಮನುಷ್ಯರಿಗೆ ಸಾಧ್ಯವೇ?

—ಸ್ಮಿತಾ ಮೈಸೂರ, ಹುಬ್ಬಳ್ಳಿ


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

ವಿಳಾಸ: editorsu@sudha.co.in

@SudhaWeekly